**ವ್ಯಾಖ್ಯಾನ**

# <u>ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ</u>

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 07.

**ಕೀರ್ತನೆಯ ಚಿಂತನೆ:**

ಶ್ರೀ ಪುರಂದರದಾಸರು ಒಂದು ಅದ್ಭುತ ಚೇತನ. ಅವರ ಜೀವನದ ಪ್ರತಿ ಕ್ಷಣವೂ ಬರಹದ ಪ್ರತಿ ಅಕ್ಷರವೂ ಉದ್ಬೋಧಕ ಹಾಗೂ ಚಿಂತನೀಯ. ಗುರುಗಳ ಸರ್ವೋಚ್ಚ ಪ್ರಶಂಸೆಗೆ ಪಾತ್ರರಾದ ಇವರ ವ್ಯಕ್ತಿತ್ವ ಅನ್ಯತ್ರ ಕಾಣಸಿಗದು. ಅವರ ಜೀವನದ ನಡೆ–ನುಡಿ ಜಗತ್ತಿಗೆ ಪವಾಡಗಳಾಗಿ ಕಂಡಿತು. ಇವರಿಂದ ಪ್ರತಿಷ್ಠಾಪಿತ ಹರಿದಾಸಕೂಟ ಇಂದಿಗೂ, ಮುಂದೂ ಎಲ್ಲ ಸಜ್ಜನರ–ಹರಿಭಕ್ತರ ಕೂಟಕ್ಕೆ ಕಾರಣವಾಗಿದೆ. ಅವರಿಂದ ರಚಿಸಲ್ಪಟ್ಟ ಎಲ್ಲ ಕೃತಿಗಳೂ ಉಪನಿಷತ್ ವಾಣಿ, ದೇವವಾಣಿ ಅದುವೇ ತತ್ತ್ವವಾಣಿಯಾಗಿ ದಾಸವಾಣಿ ಎನಿಸಿದೆ. ಈ ಮೇಲಿನ ಕೃತಿ ಒಂದು ಉದಾಹರಣೆಯೆನ್ನಬಹುದು. ಒಬ್ಬ ಮನುಷ್ಯ ನಿಜಾರ್ಥದಲ್ಲಿ ಮನುಷ್ಯನೆನಿಸಲು, ಒಬ್ಬ ಭಕ್ತ ಸದ್ಭಕ್ತನಾಗಲು, ಒಬ್ಬ ಸಾಮಾನ್ಯ ಅಸಾಮಾನ್ಯನಾಗಲು ಹೇಗಿರಬೇಕು ಎಂಬುದರ ದಿಗ್ದರ್ಶನ ಇಲ್ಲಿದೆ. ಇಲ್ಲಿ ದಾಸರು ಪುನಃ ಪುನಃ ಹೇಳಿದ ಬೇಕುಗಳು ನಿತ್ಯ ಸುಖ ಬೇಕೆಂಬುವರಿಗೆ, ಶಾಂತ ಜೀವನ ಸಾಗಿಸುವವರಿಗೆ, ನೆಮ್ಮದಿಯ ಬದುಕನ್ನು ಬಯಸುವವರಿಗೆ ಬೇಕಾದ ಬೇಕುಗಳು. ಶ್ರೀ ದಾಸರು ಸಿದ್ಧಾಂತದ ಮರ್ಮವನ್ನು ತಮ್ಮ ವಿಶಿಷ್ಟ ಶೈಲಿಯಲ್ಲಿ, ಅದ್ಭುತ ಜೋಡಣೆಯೊಂದಿಗೆ ಜೋಡಿಸಿರುವುದು ಎಲ್ಲರ ಭಾಗ್ಯ. ಸತ್ಯವಾಗಿಯೂ ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ.

**ಇದು ಭಾಗ್ಯ ಇದುಭಾಗ್ಯ ಇದು ಭಾಗ್ಯವಯ್ಯ ।**
**ಪದುಮನಾಭನ ಪಾದ ಭಜನೆ ಸುಖವಯ್ಯ ॥ ಪ ॥**

ಶ್ರೀ ದಾಸರ ಈ ಕೃತಿಯ ವಿಶ್ಲೇಷಣೆ ಅಥವಾ ವಿವರಣೆ ಮೇಲ್ನೋಟಕ್ಕೆ ಬೇಡವೆನ್ನಿಸಬಹುದು. ಆದರೆ ಕೃತಿಯನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದಲ್ಲಿ ಅನಂತಾರ್ಥ ಗರ್ಭಿತ. ಈ ಕೃತಿಯ ಪ್ರತಿ ಪದಗಳ ಆಂತರ್ಯ ಆಶ್ಚರ್ಯ ಜನಕವಲ್ಲದೆ ಸತ್ಸಿದ್ಧಾಂತದ ತತ್ತ್ವಗಳಾಗಿವೆ. ಒಬ್ಬ ಸಾಧಕ ಜೀವಿ ಏನೆಲ್ಲಾ ಸಾಧಿಸ

ಬಯಸುವವನು ಹೊಂದಿರಲೇಬೇಕಾದ ವಿಷಯಗಳ ಪಟ್ಟಿ ಇಲ್ಲಿದೆ. ದಾಸರು ಹೇಳದೇ ಬಿಟ್ಟ ವಿಷಯವೇ ಇಲ್ಲವೆನ್ನಬಹುದು. ನಮ್ಮ ಮಿತಮತಿಯಿಂದ ಕೃತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

ದಾಸರು ಮೊದಲು ಪ್ರಯೋಗಿಸಿದ ಪದ ಇದು ಇದು ಮೂರು ಸಲ ಒಂದೇ ಸಾಲಿನಲ್ಲಿ ಬಂದಿದೆ. ಇದು ಪುನರುಕ್ತಿಯಲ್ಲ. ಅತ್ಯಾದರೋಕ್ತಿ. ಇದು ಈ ಜನ್ಮ, ಈ ದೇಹ, ಈ ಅವಸ್ಥೆ, ಈ ಪರಂಪರೆ, ಈ ಸಿದ್ಧಾಂತಾನುಯಾಯಿತ್ವ, ಈ ಸಂಸ್ಕಾರ, ಈ ಪರಿಸರ, ಈ ಭೂಮಿ, ಈ ಕಾಲ, ಈ ದೇಶ, .... ಮುಂತಾದ ಈ ಎಲ್ಲ ಇವುಗಳು ಪಡೆದದ್ದು ಭಾಗ್ಯ.  ಅತಿ ಅತಿ ದುರ್ಲಭವಾದ ಈ ಜನುಮ ಮತ್ತೆ ಸಿಗೊತ್ತೋ ಇಲ್ಲವೊ, ಈಗ ಸಿಕ್ಕಿದೆ ಇದು ಪರಮ ಭಾಗ್ಯವಲ್ಲವೆ? ಇದನ್ನು ಸ್ಮರಿಸಿಕೊಳ್ಳಿ ಎಂದು ಒತ್ತಿ ಒತ್ತಿ ಹೇಳಿದರು ದಾಸರು. ಏಕೆ ಇದುಭಾಗ್ಯ, ಎಂಬುದಕ್ಕೆ ಉತ್ತರವಾಗಿ ಮುಂದಿನ ಸಾಲು. ಪದುಮನಾಭನನ್ನು ಭಜಿಸಲು ಅದಕ್ಕೆ ಸಿಕ್ಕ ಅತ್ಯಮೂಲ್ಯವಾದ ದೇಹ. ದೇಹಕ್ಕೆ ಅಂಟಿಕೊಂಡ ಸಂಸ್ಕಾರ, ಜೊತೆಗಿರುವ ಮಾರ್ಗದರ್ಶಕ ಗುರುಗಳು, ತಿದ್ದಿಹೇಳುವ ಹರಿದಾಸರು, ಭಗವದ್ಭಕ್ತರ ಸಹವಾಸ – ಪರಿಸರ, ಶುದ್ಧ ದೇಶ–ಶುಭ ಕಾಲ ಇವೆಲ್ಲಾ ಹೊಂದಿರುವುದು ನಮ್ಮ ಭಾಗ್ಯವಲ್ಲವೆ? ಅದೇ ಇದು, ಇದು ಭಾಗ್ಯ – ಇದು ಭಾಗ್ಯ ಹೀಗೆ ಹೇಳುತ್ತಾ ಹೋದರೆ ಈ ಲೇಖನವೆಲ್ಲಾ ಇದು–ಭಾಗ್ಯಗಳ ವ್ಯಾಖ್ಯಾನವೇ ಆಗಿಬಿಡಬಹುದು. ಮನುಷ್ಯ ಜೀವನದಲ್ಲಿ ಏನೇ ಆದರೂ ವಿಚಲಿತನಾಗದೆ, ಹತಾಶನಾಗದೆ, ಅನ್ಯಮಾರ್ಗಾವಲಂಬಿಯಾಗದೇ ಜೀವಿಸಲು ಆಶ್ವಾಸನೆಯ – ಧೈರ್ಯ ತುಂಬುವ ಮಾತುಗಳು ಇವಾಗಿವೆ.  ಇನ್ನು ಜೀವನದಲ್ಲಿ ಸುಖ ಕೊಡುವ ವಸ್ತು ಯಾವುದು ಎಂಬುದನ್ನು ಒಂದೇ ಮಾತಿನಲ್ಲಿ ಹೇಳಿದರು. ಭಗವಂತನ ಪಾದ ಭಜನೆ ಎಂದು. ಶ್ರೀ ಹರಿಯ ಪಾದಗಳಿಗೆ 'ಸುವಃ' ಎಂದು ಶಾಸ್ತ್ರಗಳು ಕರೆದಿವೆ. 'ಸು' ಎಂದರೆ ಆನಂದ (ಸುಖ), 'ವ' ಎಂದರೆ ಸಮೀಚೀನ ಜ್ಞಾನ.  ಈ ಪಾದದ್ವಂದಗಳನ್ನು ಆರಾಧಿಸಿದಲ್ಲಿ ಸುಖ ಹಾಗೂ ಜ್ಞಾನ ಲಭ್ಯವೆಂದರೆ, ಮತ್ತಿನ್ನೇನು ಬೇಕು? ಈ ಎರಡರಲ್ಲಿ ಎಲ್ಲವೂ ಅಡಕವಾಗಿದೆಯಲ್ಲವೆ !

ಜೀವನದಲ್ಲಿ ಇಂದು ಮುಂದು ಜನುಮ ಜನುಮಗಳಲ್ಲೂ ಕಡೆಗೆ ನಿತ್ಯ ಸುಖದ ತಾಣವನ್ನು ಸೇರಿದಾಗಲೂ ಶುದ್ಧವಾದ – ಶಾಸ್ತ್ರೋಚಿತವಾದ ಸುಖವು ಹಾಗೂ ಎಂದಿಗೂ ನಾಶವಾಗದ ಶ್ರೀಮದಾಚಾರ್ಯರು ಪ್ರತಿಪಾದಿಸಿದ ಸತ್ಸಿದ್ಧಾಂತ ಜ್ಞಾನವು ಲಭಿಸಲು ನಾವು ಹೇಗಿದ್ದು – ನಾಳೆ ಇತರರಿಗೂ ಮಾರ್ಗದರ್ಶಕರಾಗಿ ಇರಬೇಕೆಂಬುದರ ದೀರ್ಘ – ಬಹ್ವರ್ಥಗರ್ಭಿತ ಮಾತುಗಳಿಂದ ದಾಸರು ನಿರೂಪಿಸಿ ನಮ್ಮ ಕಣ್ಣುಗಳನ್ನು ತೆರೆಸುವವರಾಗಿದ್ದಾರೆ.  ಈ ಅಪರೋಕ್ಷಿ ಜ್ಞಾನಿಗಳ ಒಂದೊಂದು ಮಾತುಗಳೂ ದಿವ್ಯ ಮಂತ್ರಗಳೆಂದು ಭಾವಿಸಬೇಕು.

**ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ**
**ಬಿಲ್ಲಾಗಿ ಇರಬೇಕು ಬಲ್ಲವರೊಳು**
**ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು**
**ಬೆಲ್ಲವಾಗಿರಬೇಕು ಬಂಧು ಜನರೊಳಗೆ** ॥ **1** ॥

ಮನುಷ್ಯನ ಜೀವನದಲ್ಲಿ ಸುಖ–ದುಃಖಗಳು, ಅಡೆತಡೆಗಳು, ಜಯಾಪಜಯಗಳು, ಏರಿಳಿತಗಳು, ಮಾನಾಪಮಾನಗಳು, ಲಾಭ–ನಷ್ಟಗಳು – ಹೀಗೆ ಅನೇಕ. ಎಂತಹವರಿಗೂ ಇದು ಬಿಡದ ಗಂಟು. ಇದಕ್ಕೆ ಸಂಸಾರವೆಂದರು. ಶ್ರೀ ಕೃಷ್ಣ ಗೀತೆಯಲ್ಲಿ ಇಂತಹ ಪ್ರಸಂಗಗಳನ್ನು ಗೆಲ್ಲುವುದು ಜಾಣತನವೆಂದ. ಇವೆಲ್ಲಕ್ಕೂ ಮನಸ್ಸೇ ಕಾರಣ. ಈ ಮನಸ್ಸನ್ನು ಗಟ್ಟಿಯನ್ನಾಗಿಸಿಕೊಂಡಲ್ಲಿ ಅದು ವಿಚಲಿತಗೊಳ್ಳದು. ಅದನ್ನೇ ಕಲ್ಲಾಗಿ ಇರಬೇಕು ಎಂದು ಬೋಧಿಸಿದರು. ಈ ಗೊಂಡಾರಣ್ಯವೆಂಬ ಸಂಸಾರದಲ್ಲಿ ದಿಕ್ಕು ತೋರದಂತಹ ತೊರೆಯೊಳಗೆ ಸಿಕ್ಕಿಕೊಂಡವ ಮನಸ್ಸನ್ನು ಕಲ್ಲಾಗಿ (ಜಡದಂತೆ) ಮಾಡಿಕೊಂಡಲ್ಲಿ ಎಂತಹ ಪರಿಸ್ಥಿತಿಯನ್ನೂ ಎದುರಿಸಬಹುದೆಂದರು. ಎಂತಹ ಗಾಳಿ ಮಳೆ ಛಳಿ ಬಿಸಲು ಇವುಗಳಿಗೆ ಅಂಜದ ಹಿಂಜರಿಯದ ಸ್ವಭಾವ ಕಲ್ಲಿನದು. ಹೀಗೆ ಮನುಷ್ಯ ಕಲ್ಲಾಗಿ ಕಲ್ಲಿನಂತಿರಬೇಕೆಂಬ ಭಾವವು ಔಚಿತ್ಯಪೂರ್ಣ. ನಾವು ಉತ್ತಮ ಚಿಂತಕರಾಗಲು, ಸಿದ್ಧಾಂತದ ಪ್ರಮೇಯಗಳನ್ನು ಅರಿಯಲು, ಸಾಧು–ಸಂತರೊಂದಿಗೆ ಬೆರೆಯಲು ಜ್ಞಾನಿಗಳ ಸಹವಾಸ ಅತ್ಯಾವಶ್ಯಕ. ಇಂತಹ ಜ್ಞಾನಿಗಳೊಂದಿಗಿರುವಾಗ ಎಂದಿಗೂ ದುರಹಂಕಾರದಿಂದಾಗಲಿ, ಮತ್ತ–ಪ್ರಮತ್ತನಾಗಿ ನಡೆದುಕೊಳ್ಳಬಾರದು. ಈ ಪ್ರವೃತ್ತಿ ಸರ್ವನಾಶಕ್ಕೆ ಕಾರಣವಾಗುವುದು. ಗುರುಹಿರಿಯರಲ್ಲಿ, ಜ್ಞಾನಿಗಳ ಸಮ್ಮುಖದಲ್ಲಿ, ಬಿಲ್ಲಾಗಿ (ತಗ್ಗಿ–ಬಗ್ಗಿ) ಇರಬೇಕು ಎಂಬ ಹಿತನುಡಿಯನ್ನು ಹೇಳಿದರು. ಬಿಲ್ಲು ಬಿದರಿನ ಕಡ್ಡಿಯಿಂದಾಗಿಸಿ ಅದಕ್ಕೆ ಜ್ಯಾ (ಹಗ್ಗ) ವನ್ನು ಕಟ್ಟಿ ಬಗ್ಗಿಸಿರುವುದು ಕಂಡಿದೆ. ನಾವು ಕಡ್ಡಿ ಎಂತಾದರೆ ಇದನ್ನು ಬಗ್ಗಿಸಿ ನಿಯಂತ್ರಿಸುವುದು ಶಾಸ್ತ್ರಗಳು. ಅಮೂಲಾಗ್ರವಾಗಿ ಎಂದರೆ ಎಲ್ಲ ಅವಸ್ಥೆಗಳಲ್ಲಿ ಎಲ್ಲ ಆಶ್ರಮಗಳಲ್ಲೂ ಎಂದಂತೆ 'ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾ ಕಾರ್ಯ ವ್ಯವಸ್ಥಿತೌ' ಎಂಬಂತೆ ಶಾಸ್ತ್ರೋಚಿತವಾದ ವಿಧಿ–ನಿಷೇಧಗಳ ಅವಲಂಬನೆ ಇದ್ದಲ್ಲಿ ಮಾತ್ರ ಉದ್ಧಾರವೆಂದು ಸಮಯೋಚಿತ ಉಪಮೆಯಿಂದ ಪ್ರತಿಪಾದಿಸಿರುವರು.

ನಮ್ಮ ಎಲ್ಲ ಸಾಧನಗಳೂ ಭಗವಂತನ ಪ್ರೀತಿ ಸಂಪಾದಿಸುವುದರಲ್ಲಿ ಅಡಗಿದೆ. ಶ್ರೀ ಹರಿಯ ಅತ್ಯರ್ಥಪ್ರಸಾದದಿಂದ ಮಾತ್ರ ಉದ್ಧಾರವಲ್ಲದೆ ಅನ್ಯಗತಿಯೇ ಇಲ್ಲವೆಂದು ಶಾಸ್ತ್ರವಚನವು. ಅಂತಹ ಭಗವಂತನನ್ನು ಮೆಚ್ಚಿಸುವಲ್ಲಿ ಸಾಧಕನ ಎಲ್ಲ ಪ್ರಯತ್ನಗಳೂ ಇರಬೇಕು. ಇದಕ್ಕೆ ದಾಸರು ತೋರಿದ ಉಪಾಯ 'ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು' ಎಂದು. ಇಲ್ಲಿ ಮೆಲ್ಲನೆ ಎಂದರೆ ನಿಧಾನವಾಗಿ

ಹೆಜ್ಜೆ ಹಾಕುತ್ತಾ ಬಾಲಕರಂತೆ ಎಂದಲ್ಲ. ಶಾಸ್ತ್ರೋಕ್ತ ರೀತಿಯಿಂದ ಎಂದು ತಿಳಿಯಬೇಕು. ಇದಕ್ಕೆ ಉತ್ತರವನ್ನು ಭಕ್ತಿಯ ಬಗ್ಗೆ ಹೇಳುವಾಗ ಪ್ರಹ್ಲಾದರಾಜರು ಹೇಳಿ– ಮಾಡಿ ತೋರಿರುವರು. 'ಭಕ್ತ್ಯೈಕವಶ್ಯಃ ಪ್ರಭುಃ' ಎಂದಾದ್ದರಿಂದ, ಭಕ್ತಿಯ ಒಂಭತ್ತು ವಿಧವಾದ ಮಜಲುಗಳನ್ನು ತಿಳಿದಿರಬೇಕು, 'ಶ್ರವಣಂ ಕೀರ್ತನಂ ವಿಷ್ಣೋಃ ಅರ್ಚನಂ ಪಾದ ಸೇವನಂ.......'

ಹೀಗೆ ತಿಳಿಸಿದ ರೀತಿಯಲ್ಲಿ ಎಲ್ಲ ವಿಧಗಳಿಂದ ಭಗವಂತನನ್ನು ಸೇವಿಸುವ ಕಲೆಯನ್ನು ರೂಢಿಸಿಕೊಳ್ಳಬೇಕು. ಮುಂದುವರೆದ ಶ್ರವಣ ಮನನ ನಿಧಿ ಧ್ಯಾಸನಾದಿಗಳಿಂದ, ಎಲ್ಲವನ್ನೂ ಜ್ಞಾನ–ಭಕ್ತಿ–ವೈರಾಗ್ಯ ಪೂರ್ವಕದಿ ಹೆಜ್ಜೆ ಹೆಜ್ಜೆ ಎಂಬಂತೆ, ಅಂತಃಕರಣ ಶುದ್ಧಿಯಿಂದ ಏಕಾಗ್ರತೆಯನ್ನು ಸಂಪಾದಿಸಿಕೊಂಡು ಆರಾಧಿಸಬೇಕು. ಇಲ್ಲಿ ಮಾಧವ ಎಂದದ್ದು ಸ್ವಾರಸ್ಯಕರವಾಗಿದೆ. ಮಾ ಎಂದರೆ ಲಕ್ಷ್ಮೀ, ಅವಳಿಗೆ ಒಡೆಯ ಎಂದರೆ ಜ್ಞಾನ–ಸಂಪತ್ತು–ಐಶ್ವರ್ಯಾದಿಗಳ ಮೂರ್ತಿಯಾದ ಲಕ್ಷ್ಮೀಗೆ ಒಡೆಯನಾದ್ದರಿಂದ ಅವೆಲ್ಲವನ್ನೂ ಕೊಡುವವನೆಂದು ಸೂಚಿತವಾಗಿದೆ.

ಮಾನವ ಸಂಘಜೀವಿ. ಸಮಾಜದಿಂದ ಹೊರಬರಲು ಸಾಧ್ಯವೇ ಇಲ್ಲ. ಅದರಲ್ಲೂ ಬಂಧು–ಬಾಂಧವರನ್ನು ಅಗಲಿ ಬಾಳಲಾಗದು. ಇಂತಹ ಪ್ರಸಂಗದಲ್ಲಿ 'ಬೆಲ್ಲವಾಗಿರಬೇಕು' ಎಂದರು. ಬೆಲ್ಲದ ಗುಣ ಎಂತಹ ಕ್ರಿಮಿಕೀಟಗಳನ್ನೂ, ವಿಷಭರಿತ ಪ್ರಾಣಿಗಳನ್ನು ಆಕರ್ಷಿಸುವುದು. ಜೀವನದಲ್ಲಿ ಮನುಷ್ಯ ಸುಖದಿಂದಿರಲು ಬಂಧು–ಬಾಂಧವರನ್ನು ಎಂದಿಗೂ ಎದುರು ಹಾಕಿಕೊಳ್ಳಬಾರದು. ಇಲ್ಲಿ ಯಾರದ್ದು ಸರಿ–ತಪ್ಪು ಎಂಬುದರಕ್ಕಿಂತಲೂ, ಮನಃಶಾಂತಿ ಮುಖ್ಯವಾದದ್ದು. ವ್ಯಾಕುಲ ಮನಸ್ಸಿನಿಂದ ಏನೂ ಸಾಧಿಸಲಾಗದು. ಅಲ್ಲದೇ ಸಂಸಾರದಲ್ಲಿ ರಾಗ ದ್ವೇಷಾದಿಗಳು ಬೆಳೆದು ವಾತಾವರಣವೇ ಕಲುಷಿತವಾಗುವ ಸಾಧ್ಯತೆಗಳುಂಟು.

ಕಠಿಣ ಭವದತೊರೆಯೊಳಗೆ ಕಲ್ಲಾಗಿ ಇರಬೇಕೆಂದು ನುಡಿದ ದಾಸರು ಬಂಧು ಜನರೊಳಗೆ ಬೆಲ್ಲವಾಗಿರಬೇಕೆಂದರು. ಇವೆರಡರ ಸಮತೋಲನೆಯೆ ಜಾಣ್ಮೆಯ ಬದುಕು. ಈ ಅದ್ಭುತವಾದ ಮರ್ಮವನ್ನು ತಿಳಿಸಿಕೊಟ್ಟು ನಿಜಾರ್ಥದಲ್ಲಿ ದಾರಿದೀಪರಾದವರು ಶ್ರೀ ಪುರಂದರದಾಸರು.

**ಬುದ್ಧಿಯಲಿ ತನುಮನವ ತಿದ್ದಿಕೊಳ್ಳಲು ಬೇಕು**
**ಮುದ್ದಾಗಿ ಇರಬೇಕು ಮುನಿ ಯೋಗಿಗಳಿಗೆ**
**ಮಧ್ವಮತಾಬ್ಧಿಯೊಳು ಮೀನಾಗಿ ಇರಬೇಕು**

## ಶುದ್ಧನಾಗಿರಬೇಕು ಕರಣ ತ್ರಯಗಳಲಿ ॥ 2 ॥

'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ' ಎಂದು ಶ್ರೀ ಕೃಷ್ಣ ಹೇಳಿದ. ಈ ಚಂಚಲವಾದ ಮನಸ್ಸು ಇಂದ್ರಿಯಗಳಿಗೆ ವಶವಾಗಿರುತ್ತದೆ. ಈ ಇಂದ್ರಿಯಗಳು ವಿಷಯಗಳಿಗೆ ಆಕರ್ಷಿತವಾಗಿ ಗುರಿ–ದಿಕ್ಕು ಎಂಬುದಿಲ್ಲದೆ ಎತ್ತೆತ್ತಲೋ ಓಡುತ್ತವೆ. ಮನಸ್ಸು ಇದಕ್ಕೆ ಬಲಿಯಾಗಿ ನಿಯಂತ್ರಣವನ್ನೇ ಕಳೆದುಕೊಂಡು ಸ್ವೇಚ್ಛಾ ಪ್ರವೃತ್ತಿಯಿಂದ ಪರದಾಡಿ ಕಡೆಗೆ ವಿನಾಶದತ್ತ ಸಾಗುತ್ತದೆ. ಇನ್ನು ಈ ಇಂದ್ರಿಯಗಳಿಗೆ ವಶವಾದ ಭೌತಿಕ ದೇಹ ಕಾಮ ಕ್ರೋಧಾದಿಗಳಿಂದ ಕೂಡಿದ್ದಾಗಿ ಮಾಡಬಾರದ ಕಾರ್ಯಗಳಿಗೆ ಮುನ್ನುಗ್ಗುತ್ತದೆ. ಇನ್ನು ಸಾಧನೆ–ಸಿದ್ಧಿ–ಭಕ್ತಿ ವೈರಾಗ್ಯಾದಿಗಳಿಗೆ ಅವಕಾಶವೆಲ್ಲಿ. ಅದಕ್ಕೇ ದಾಸರೆಂದರು ಬುದ್ಧಿಯಲಿ ತನು ಹಾಗೂ ಮನಸ್ಸನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಎಂದು. ಇಂದ್ರಿಯಗಳು ಕುದುರೆಗಳಾದರೆ ಬುದ್ಧಿಯು ಅವುಗಳಿಗೆ ಹಾಕಿದ ಲಗಾಮು. ಆಗ ಮಾತ್ರ ಬಹಿರ್ಮುಖವಾದ ಇಂದ್ರಿಯಗಳು ಅಂತರ್ಮುಖಿಯಾಗಿ ಹೃದಯ ಗುಹಾವಾಸಿಯಾದ ಭಗವಂತನನ್ನು ನೋಡಲು ಸಾಧ್ಯವಾದೀತು. ಶ್ರೀ ಕೃಷ್ಣ ಅರ್ಜುನನಿಗೆ ಉಪದೇಶ ಮಾಡಿದ್ದು ಇದನ್ನೇ. ಮನಸ್ಸಿನ ಹತೋಟಿಯೇ ವಿಷಯಗಳಿಂದ ದೂರವಿರಲು ಸಹಕಾರಿಯಾದದ್ದು. ಇದನ್ನೇ ತಿದ್ದಿಕೊಳ್ಳವುದೆಂದರು. ತನು–ಮನಗಳು ನಿಯಂತ್ರಣಕ್ಕೆ ಬಂದರೆ ತಿದ್ದಿಕೊಂಡಂತೆ. ಪ್ರಮಾದಗಳಿಂದ ದೂರಾದಂತೆ ಎಂದು ತಿಳಿಸುವರು. ಇದಕ್ಕೆ ಅಧ್ಯಯನ–ಅಭ್ಯಾಸಾದಿಗಳು ಬೇಕು. ಯಾವಾಗ ವಿಷಯಗಳಿಗೆ ವಿಮುಖನಾಗುವನೋ ಆವಾಗ ಅಂತಿಮ ಗುರಿ ವಿಷಯನಾದ ಭಗವಂತ ಹತ್ತಿರನಾಗುವ.

ಜೀವನದಲ್ಲಿ ಮನುಷ್ಯರಿಗೆ ಆದರ್ಶರೆಂದರೆ ಸಾಧು–ಸಜ್ಜನರು, ಭಗವದ್ಭಕ್ತರು, ಋಷಿ–ಮುನಿಗಳು ಅದಕ್ಕೆ 'ಸಂಗವಾಗಲಿ ಸಾಧು ಸಂಗವಾಗಲಿ' ಎಂದದ್ದು. ಒಟ್ಟಾರೆ ಇವರನ್ನು ಮುನಿಯೋಗಿಗಳೆಂದು ದಾಸರು ಕರೆದರು. ಇವರು ಶಾಸ್ತ್ರಜ್ಞಾನ ಪಡೆದು ಸಿದ್ಧಿಯನ್ನು ಪಡೆದವರು, ಕೆಲವರು ಭಗವಂತನನ್ನು ಕಂಡವರು. ಕಂಡು ನಲಿದಾಡಿದ ಆನಂದಾನುಭವಿಗಳು. ಇಂತಹವರ ಅನುಭವ – ಮಾರ್ಗದರ್ಶನ ನಮಗೆ ಬೇಕು. ಇವರನ್ನು ಒಲಿಸಿಕೊಳ್ಳುವ ಬಗೆಯನ್ನು ದಾಸರು 'ಮುದ್ದಾಗಿ ಇರಬೇಕು' ಎಂದು ಮುದ್ದಾದ ಮಾತನ್ನು ಹೇಳಿದರು. ಇದರ ಆಂತರ್ಯ ಸೊಗಸಾಗಿದೆ. ದೊಡ್ಡವರಿಗೆ ಚಿಕ್ಕ ಬಾಲಕರು ಮುದ್ದಾಗಿ ಕಾಣುವರು. ಅದಕ್ಕೇ ಅವರನ್ನು ಎತ್ತಿ ಮುದ್ದಿಡುವರು. ಇದಕ್ಕೆ ಕಾರಣ ಬಾಲಕರಲ್ಲಿಯ ಮುಗ್ಧತೆ. ನಿಷ್ಕಲ್ಮಷ ಮನಸ್ಸು ಕಪಟ–ವಂಚನೆ–ಆಡಂಬರಾದಿಗಳಿಲ್ಲದ ಹಸುಗಳು. ಈ ಗುಣಗಳನ್ನು ದೊಡ್ಡವರೂ ರೂಢಿಸಿಕೊಂಡಲ್ಲಿ ಹಸುಗಳೆ. ಇಂತಹವರನ್ನು ಮುನಿಯೋಗಿಗಳು ಅಭಿಮಾನದಿ, ಸದ್ಭಾವದಿ, ಅನುಕಂಪದಿಂದ

ಆದರಿಸದಿರರು. ಆಗ ಸಾಧನ ಜೀವಿಯು ಸೋಪಾನವೇರಿದಂತಾಗಿ ತನ್ನ ಯೋಗ್ಯತೆಯ ಆನಂದದ ತುದಿಯನ್ನು ಮುಟ್ಟುವ.

ಶ್ರೀ ವಿಜಯದಾಸರು 'ಮಧ್ವ ಮತವೇ ಮತವು ಸಕಲ ಶ್ರುತಿ ಸಮ್ಮತವು' ಎಂದರೇ ಅಂದೇ ಶ್ರೀ ಪುರಂದರರು 'ಮಧ್ವಮತದ ಸಿದ್ಧಾಂತದ ಪದ್ಧತಿ ಬಿಡಬೇಡಿ ಬಿಟ್ಟು ಕೆಡಬೇಡಿ' ಎಂದರು. ಹೀಗೆಂದುದರ ಹಿನ್ನೆಲೆ ಅವರಿಗಿದ್ದ ಸಿದ್ಧಾಂತ ದೀಕ್ಷೆ ಹಾಗೂ ಅಚಲ ವಿಶ್ವಾಸ. ಈ ಒಂದು ತೆರನಾದ ಅವಸ್ಥೆ ಅವರಲ್ಲೆ ಬಂದದ್ದು ಆಧ್ಯಾತ್ಮದಲ್ಲೆ ಮುಳುಗಿ ತನ್ಮಯ ಚಿತ್ತರಾದ್ದರಿಂದ. ಇದು ಎಲ್ಲ ಸಜ್ಜನರಲ್ಲಿ ಈ ಭಾವನೆ ಬರಲೆಂದೆ ದಾಸರು 'ಮಧ್ವ ಮತಾಬ್ಧಿಯೊಳು ಮೀನಾಗಿ ಇರಬೇಕು' ಎಂಬ ಅದ್ಭುತವಾದ ಉಪಮೆಯೊಂದಿಗಿನ ಮಾತನ್ನಾಡಿದರು. ಮೀನು ಪರಾವಲಂಬಿ, ಅಂದರೆ ನೀರಿಲ್ಲದೆ ಇರಲಾರದು. ಹೊರ ಬಂದರೆ ಸತ್ತಂತೇ. ಅದು ಒಂದು ಕಡೆ ನಿಲ್ಲದು ಅಲ್ಲದೆ ಅದು ಜೀವನದಲ್ಲೇ ನಿದ್ರಿಸದ ಪ್ರಾಣಿ. ಮೀನಿನ ಇನ್ನೊಂದು ಗುಣ ನಿರಾತಂಕವಾಗಿ ಸ್ವೇಚ್ಛೆಯಿಂದ ನೀರಿನಲ್ಲೇ ವಿಹರಿಸುವುದು. ಈಗ ನೀರಿನ ಜಾಗದಲ್ಲಿ ಮಧ್ವಮತ, ಮೀನಾಗಿ ಸಾಧಕ ಜೀವಿ ಎಂದಿಟ್ಟುಕೊಂಡಲ್ಲಿ ಸುಲಭದಿ ಅರ್ಥವಾದೀತು. ಸಕಲ ಸದಾಗಮಗಳಿಂದ ನಿರ್ಣೀತವಾದ, ಜೀವೋತ್ತಮರಾದ ವಾಯುದೇವರ ಅವತಾರರಾದ ಆಚಾರ್ಯಮಧ್ವರಿಂದ ಪ್ರವರ್ತಕವಾದ, ನಿರ್ದುಷ್ಟವಾದ ಮತ್ತು ಅಂತ್ಯ ಸಿದ್ಧಾಂತವೆನಿಸಿ ಶ್ರೀ ವೇದವ್ಯಾಸರಿಗೆ ಸಮ್ಮತವಾದ ಮತವು ಈ ಮಧ್ವಮತವಾಗಿರುವುದು, ಅದರ ಅನುಯಾಯಿಯಾಗಿ ಈ ಪರಂಪರೆಯಲ್ಲಿ ಬಂದಿರುವುದು ಎಂದರೆ ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ ಎಂದಂತಾಗಿದೆ. ಈ ಒಂದು ಮಾತಿನಲ್ಲಿ ಶ್ರೀ ದಾಸರು ಸಕಲ ಶಾಸ್ತ್ರಾರ್ಥ ಸಾರವನ್ನು ತುಂಬಿಟ್ಟಿರುವರು. ಮೀನಿನಂತೆ ಇದರ ವಿನಾ ಉದ್ಧಾರವೆಂಬುದಿಲ್ಲ. ಇಲ್ಲಿ ದಾಸರು ಮೀನನ್ನೇ ಉಪಮಾನವಾಗಿ ಇಟ್ಟಿರುವುದು ತುಂಬ ಔಚಿತ್ಯಪೂರ್ಣ ಹಾಗೂ ಉದ್ಬೋಧಕ.

ಈ ಮೇಲಿನ ಎಲ್ಲವೂ ಸಿದ್ಧಿಸಲು ಬೇಕಾದ ಅತ್ಯಾವಶ್ಯಕ ಅಂಶವೆಂದರೆ ಮನುಷ್ಯ ಅಂತಃಕರಣದಿಂದ ಶುದ್ಧನಾಗಿರಬೇಕು. ಕಾಯಾ–ವಾಚಾ–ಮನಸಾ ಒಂದೇಯಾಗಿ ಸರ್ವಾತ್ಮನಾ ಸತ್‌ಸಿದ್ಧಾಂತವನ್ನು ನಂಬಿ ಅದರಂತೆ ನಡೆದುಕೊಂಡಲ್ಲಿ ಅವನು ಹರಿವಾಯು ಗುರುಗಳಿಗೆ ಹತ್ತಿರದವನಾಗುವ ಇದು ನಿಜಾರ್ಥದ ತತ್ತ್ವ. ದಾಸರು ಏನೆಲ್ಲಾ ಬೇಕುಗಳು ಹೇಳಿ ಇವುಗಳ ಸಂಪಾದನೆಯೆ ಭಾಗ್ಯ, ಇದುವೇ ಭಾಗ್ಯ ಎಂದದ್ದು ಸಾರ್ಥಕವಾದಂತೆ. 'ಮನಸ್ಯೇ ಕಂ ಕರ್ಮಣ್ಯೇಕಂ ಸದಾತ್ಮನಾಂ' ಎಂದಂತೆ ತ್ರಿಕರಣ ಶುದ್ಧಿ ಇದ್ದಲ್ಲಿ ಯಾವುದನ್ನೂ ಸಾಧಿಸಲು ಸಾಧ್ಯವಾದ್ದರಿಂದ ದಾಸರು ಈ ಮಾತನ್ನು ಒತ್ತುಕೊಟ್ಟಿ ಹೇಳಿರುವರು.

**ವಿಷಯ ಭೋಗದ ತೃಣಕೆ ಉರಿಯಾಗಿರಲು ಬೇಕು**

**ನಿಶಿ ಹಗಲು ಶ್ರೀ ಹರಿಯ ನೆನೆಯ ಬೇಕು**
**ವಸುಧೇಶ ಪುರಂದರವಿಠಲ ರಾಯನ**
**ಹಸನಾದ ದಾಸರನು ಸೇವಿಸಲು ಬೇಕು** ॥ 3 ॥

ಜೀವನದಲ್ಲಿ ಆಶೆ ಎಂಬುದಕ್ಕೆ ಕೊನೆ ಎಂಬುದಿರದು. ವಿಷಯಗಳ ಮೇಲಿನ ವ್ಯಾಮೋಹದಿಂದ ಬೆಳೆಯುತ್ತಲೇ ಇರುತ್ತೆ. ಪಡೆಯಬೇಕೆಂಬ ಹಂಬಲದ ಜೊತೆಗೆ ಹಠ. ಇದು ಮನುಷ್ಯನನ್ನು ಎಲ್ಲಿಯವರೆಗೂ ಒಯ್ಯಬಹುದು. ಸುಖದ ಭ್ರಾಂತಿಯಿಂದ ಅಕಾರ್ಯ ಕಾರ್ಯಕ್ಕೂ ಹಿಂಜರಿಯ. ಶಾಸ್ತ್ರ ಸಾರುತ್ತಿದೆ, ಈ ವಿಷಯ ಭೋಗಗಳು ಅಶಾಶ್ವತ ಹಾಗು ಮಾರಣಾಂತಿಕವೆಂದು. ಅಲ್ಲದೇ ಈ ಭೋಗಗಳನ್ನು ತೃಣಕ್ಕೆ ಸಮವೆಂದು ಕರೆದರು. ಇದೇ ಮಾತನ್ನೇ ದಾಸರು ಹೇಳಿ, ಇಂತಹ ತೃಣ ಪ್ರಾಯದ ಭೋಗಗಳಿಗೆ ಉರಿಯಂತಿರಲು ಆದೇಶವಿತ್ತರು. ಇಲ್ಲಿ ದಾಸರು ಈ ತೃಣವನ್ನು ಕಿತ್ತೊಗಿಯಿರೆಂದಾಗಲಿ, ನಿಷ್ಕ್ರಿಯಗೊಳಿಸಿರೆಂದಾಗಲಿ ಹೇಳದೆ ಉರಿ ಎಂತಿದ್ದು ಸುಟ್ಟು ಭಸ್ಮ ಮಾಡಿರೆಂದರು. ಏಕೆಂದರೆ ಭಾಗವತಕಾರರು ಹೇಳಿದಂತೆ ಈ ಭೋಗಗಳ ತೃಷೆ ಅಷ್ಟು ಸುಲಭದಿ ಉಪಶಮನಗೊಳ್ಳುವುದಿಲ್ಲ. ಯಾವದೋ ಮೂಲೆಯಲ್ಲಿ ಅಂಕುರಿಸಿ ಎಲ್ಲವನ್ನೂ ಆವರಿಸಿಬಿಡುತ್ತೆ. ಅಂದರೆ ನಿಜದಾಸನೆಂದೆನಿಸಿದವು. 'ತೇನತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ' ಯದೃಚ್ಛಾ ಲಾಭ ಸಂತೃಪ್ತನಾಗಿ ಬಾಳುವುದೇ ಶ್ರೇಯಸ್ಕರವೆಂದು ಸಾರಿರುವರು.

ದಾಸರು 'ಹರಿ ಭಜನೆ ಮಾಡೋ ನಿರಂತರ' ಎಂದರು. ನಾರಾಯಣ ಪಂಡಿತರು 'ಅತ್ಯಶಕ್ತೇತು ನಿದ್ರಾದೌ ಪುನರೇವ ಸಮಾಚರೇತ್' ಎಂದು ಎಚ್ಚರಿಸಿದರು. ಒಟ್ಟಿನಲ್ಲಿ ಭಗವನ್ನಾಮಸ್ಮರಣೆಯನ್ನು ಹಗಲಿರಳೆನ್ನದೆ ಮಾಡುತಲಿರಬೇಕು. ಇದನ್ನೇ ಶ್ರೀ ಮದಾಚಾರ್ಯರು 'ಸಂತತಂ ಚಿಂತಯೇತ್ ಅನಂತಂ ಅಂತಕಾಲೇ ವಿಶೇಷತಃ' ಎಂದು ಆದೇಶವಿತ್ತದ್ದು ಶ್ರೀ ಹರಿನಾಮವೊಂದೇ ತಾರಕವೆಂದು. ಹಗಲು ಹೇಗೋ ಸ್ಮರಿಸಬಹುದು ನಿಶಿಯಲ್ಲಿ ನೆನೆಯುವುದಾದರೂ ಹೇಗೆ ಎಂಬ ಸಂಶಯಬಾರದಿರದು. ನಿದ್ರೆ ಎಂಬುದು ಶ್ರಮಪರಿಹಾರಕ ಸಾಧನ. ಭಗವಂತನ ಚಿಂತನೆಯಲ್ಲಿ ನಿರತನಾದವಗೆ, ಮಗ್ನನಾದವಗೆ ಶ್ರಮವೆಂಬುದಿರದು ಅರ್ಥಾತ್ ನಿದ್ರೆ ಬಾರದು. ಬಂದರೂ ಎಚ್ಚರವಾದಾಗಲೆಲ್ಲಾ ತಾನಾಗಿಯೇ ಹರಿನಾಮದ ನೆನಪು ಬರಬೇಕು ಎಂದು ತಾತ್ಪರ್ಯವು. ಶ್ರೀ ವಾದಿರಾಜರ ಮಾತು 'ಜಾವ ಜಾವದಳೆದ್ದು ನೆರೆಹೊರೆಯು ಕೇಳ್ವಂತೆ । ಪಾವನ್ನಚರಿತ ಹಯವದನನ್ನ ಸ್ಮರಿಸುತ್ತ ॥' ಇರಬೇಕು.

ದಾಸರು ಮೇಲೆ ನಿರೂಪಿಸಿದ ಎಲ್ಲ ಪ್ರಕಾರದ ವಿಧಿಗಳ ಪರಿಜ್ಞಾನ, ಪರಿಪಾಲನೆ, ಅಭ್ಯಾಸ, ಕಾರ್ಯತತ್ಪರತೆ ಉಂಟಾಗುವುದು ಸಾಧು–ಸಜ್ಜನರ, ಹರಿದಾಸರ ಸಹವಾಸದ ಜೊತೆಗೆ ಅನುಕರಣೆಯಿಂದ. ಅದಕ್ಕೆ ದಾಸರೆಂದರು ಭಗವಂತನ ದಾಸರನ್ನು ಸೇವಿಸಿರೆಂದು. ಇದಕ್ಕೆ ಮುಖ್ಯಕಾರಣ 'ಮುಕುಂದ ಭಕ್ತ್ಯೈ ಗುರುಭಕ್ತಿಜಾಯ್ಯೈ' ಆದ್ದರಿಂದ ಪುರಂದರ ವಿಠಲನ ಜ್ಞಾನವನ್ನು ತಿಳಿಸಿಕೊಡುವವರು ಅವನ ದಾಸರು. ಅವರ ಮೇಲೆ ಶ್ರೀ ಹರಿಗೆ ಪರಮ ಪ್ರೀತಿ. ಇವರ ಸೇವೆ ಮಾಡಿದರೆ ಭಗವಂತನಿಗೂ ಈ ಭಕ್ತನ ಮೇಲೆ ಅನುಕಂಪ ಬಾರದಿರದು. ಅದಕ್ಕೇ ದಾಸರು ವಿಠಲನ ಹಸನಾದ ದಾಸರನು ನಿಯಮೇನ ಸೇವಿಸಲು ಬೇಕು ಎಂದು ಆದೇಶ ನೀಡಿರುವರು.

ಶ್ರೀ ಪುರಂದರದಾಸರ ಗುರುಗಳಾದ ಶ್ರೀ ವ್ಯಾಸರಾಜರೆ ಇವರ ಕೃತಿಗಳನ್ನು ಪುರಂದರೋಪನಿಷತ್ ಎಂದು ಕರೆದರು. ಅಂದರೆ ಉಪನಿಷತ್ತಿನ ಸದೃಶವೆಂದು. ಅಂದ ಮೇಲೆ ಇವರ ಕೃತಿಗಳೆಲ್ಲಾ ತತ್ತ್ವಮಯ. ಹಾಗೆಯೇ ತತ್ತ್ವಬೋಧಕ. ಈ ಮೇಲಿನ ಕೃತಿಯಲ್ಲಿ ದಾಸರು ಸಿದ್ಧಾಂತದ ತತ್ತ್ವಗಳಂತಿರುವ ರಹಸ್ಯವನ್ನು ತಮ್ಮದೇ ಮಾತಿನ ಶೈಲಿಯಲ್ಲಿ ಸಾರರೂಪದಿ ಸಂಗ್ರಹಿಸಿರುವರು. ಮೂರು ನುಡಿಗಳ ಈ ಸಣ್ಣ ಕೀರ್ತನೆಯಲ್ಲಿ ಈ ಜನ್ಮದಲ್ಲಿ ಸುಖ–ಶಾಂತಿಗಳಿಂದ ಜೀವಿಸಿ ಪರಲೋಕಕ್ಕೂ ಸಾಧನೆ ಪೂರೈಸಿಕೊಳ್ಳುವಂತೆ ತತ್ತ್ವಸಾರವನ್ನು ಮಂಡಿಸಿರುವುದು ಬಹಳ ಔಚಿತ್ಯಪೂರ್ಣವಾಗಿದೆ.

**ಶ್ರೀ ಕೃಷ್ಣಾರ್ಪಣಮಸ್ತು**